## ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 ಹಾಗೂ ನಿಯಮಗಳು 2012 ರ ಬಗ್ಗೆ ಸಾರ್ವಜನಿಕರಲ್ಲಿಉದ್ಭವಿಸುವ ಸಾಮಾನ್ಯ ಪ್ರಶ್ನೆಗಳು ಹಾಗೂ ಅವುಗಳಿಗೆ ಉತ್ತರಗಳು.

(ಡಿಸೆಂಬರ್ 2012 ರಲ್ಲಿ ಪರಿಷ್ಕರಿಸಲಾಗಿದೆ)

1. ***ಪ್ರಶ್ನೆ: ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 ಯಾವ ದಿನಾಂಕದಿಂದ ಜಾರಿಗೆ ಬಂದಿದೆ?***

- **ಉತ್ತರ:** 6 – 14 ವಯೋಮಿತಿಯ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ (1 ರಿಂದ 8 ನೇ ತರಗತಿವರೆಗಿನ) ಶಿಕ್ಷಣವನ್ನು ನೆರೆಹೊರೆಯ ಶಾಲೆಯಲ್ಲಿ ಒದಗಿಸಬೇಕೆಂದು ಕೇಂದ್ರ ಸರ್ಕಾರವು ರೂಪಿಸಿದ ಶಾಸನ (ಕಾಯಿದೆ) ಈ ಕಾಯಿದೆಯು ಭಾರತ ಗಣರಾಜ್ಯದ ಪಾರ್ಲಿಮೆಂಟ್‌ನಲ್ಲಿ ಅನುಮೋದನೆಗೊಂಡು ಮಾನ್ಯ ರಾಷ್ಟ್ರಪತಿಯವರಿಂದ ಅಂಗೀಕಾರವಾಗಿ ದಿನಾಂಕ: 27.08.2009 ರಗೆಜೆಟ್‌ನಲ್ಲಿ ಪ್ರಕಟವಾಗಿದೆ. ದಿನಾಂಕ: 01.04.2010 ರಿಂದ ದೇಶದಾದ್ಯಂತ ಜಾರಿಗೆ ಬಂದಿರುತ್ತದೆ. ಕರ್ನಾಟಕದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ ಯೋಯೋಕ 2010 ಬೆಂಗಳೂರು ದಿನಾಂಕ: 25.04.2012 ರಂತೆ ಹೊರಡಿಸಲಾದ ನಿಯಮಾವಳಿಗಳ ಅಡಿಯಲ್ಲಿ2012–13 ನೇ ಶೈಕ್ಷಣಿಕ ವರ್ಷದಲ್ಲಿಜಾರಿಗೆ ಬಂದಿರುತ್ತದೆ.

2. ***ಪ್ರಶ್ನೆ: ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 ಯಾರ್ಯಾರಿಗೆ ಅನ್ವಯವಾಗುತ್ತದೆ?***

- **ಉತ್ತರ:** ಈ ಕಾಯಿದೆ ಮತ್ತು ನಿಯಮಾವಳಿಗಳ ಪ್ರಕಾರ 6 ರಿಂದ 14 ವಯೋಮಿತಿಯ ಎಲ್ಲ ಮಕ್ಕಳು ತಮ್ಮ ನೆರೆಹೊರೆಯ ಶಾಲೆಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪಡೆಯಬಹುದಾಗಿದೆ.

3. ***ಪ್ರಶ್ನೆ: ಕೆಲವು ಖಾಸಗಿ ಶಾಲೆಗಳಲ್ಲಿ ಯಾವುದೇ ಮಾಹಿತಿ ಬಂದಿರುವುದಿಲ್ಲವೆಂದು ಹೇಳಿ ಅರ್ಜಿಗಳು ಪಡೆಯುತ್ತಿರುವುದಿಲ್ಲ ಅಂತಹ ಶಾಲೆಗಳ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರ?***

- **ಉತ್ತರ:** ಆರ್.ಟಿ.ಇ ಕಾಯಿದೆ–2009 ಮತ್ತು ನಿಯಮಗಳು 2012, ಈ ಕ್ಕಾನೂನು 2012–13ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬಂದಿರುವ ಬಗ್ಗೆ ಇಲಾಖೆಯಿಂದ ಸುತ್ತೋಲೆಗಳನ್ನು ಮತ್ತು ಆದೇಶಗಳನ್ನು ಹೊರಡಿಸಲಾಗಿರುತ್ತದೆ. ಈ ಸುತ್ತೋಲೆಗಳನ್ನು ಇಲಾಖೆಯಎಲ್ಲಾ ಹಂತದ ಅಧಿಕಾರಿಗಳಿಗೆ ಕಳುಹಿಸಲಾಗಿದೆ. ಎಲ್ಲಾ ಖಾಸಗಿ ಶಾಲೆಗಳಿಗೂ ಬಿಇಓ ಮುಖಾಂತರ ಈ ಮಾಹಿತಿಗಳನ್ನು ತಲುಪಿಸಲಾಗಿರುತ್ತದೆ. ಅಲ್ಲದೆಎಲ್ಲಾ ಸುತ್ತೋಲೆಗಳನ್ನು www.schooleducation.kar.nic.inರಲ್ಲಿ ಸಹ ಪ್ರಕಟಿಸಲಾಗಿದೆ. ಯಾವುದೇ ಶಾಲೆಯಲ್ಲಿ ಮಾಹಿತಿ ಬಂದಿರುವುದಿಲ್ಲ, ಎಂಬ ಕಾರಣ ಹೇಳಿ ಅರ್ಜಿಗಳನ್ನು ಸ್ವೀಕರಿಸದೇ ಇದ್ದಲ್ಲಿ ಸಂಬಂಧಪಟ್ಟ ಕ್ಷೇತ್ರಶಿಕ್ಷಣಾಧಿಕಾರಿಯವರನ್ನು ಸಂಪರ್ಕಿಸಿ ಅವರ ಮೂಲಕ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಸೂಚಿಸಿದೆ.

4. ***ಪ್ರಶ್ನೆ: ಎಸ್.ಸಿ/ಎಸ್.ಟಿ ವರ್ಗದವರು ಸರ್ಕಾರಿ ನೌಕರರಾಗಿದ್ದರೂ ಸಹ ಅರ್ಜಿ ಸಲ್ಲಿಸಲು ಅರ್ಹರೆ?***

- **ಉತ್ತರ:**ಎಸ್.ಸಿ/ಎಸ್.ಟಿ ವರ್ಗಕ್ಕೆ ಸೇರಿದ ಸರ್ಕಾರಿ ನೌಕರರು ಸಹ ಅರ್ಜಿ ಸಲ್ಲಿಸಬಹುದು.

5. ***ಪ್ರಶ್ನೆ: ಕೆಲವು ಬಿಇಓ ಕಛೇರಿಗಳಲ್ಲಿ ಅರ್ಜಿಗಳ ಬಗ್ಗೆ ಮಾಹಿತಿ ನೀಡುವುದಿಲ್ಲ. ಅರ್ಜಿಗಳು ಎಲ್ಲಿ ದೊರೆಯುತ್ತವೆ ಎಂಬುದನ್ನು ಸರಿಯಾಗಿ ಮಾಹಿತಿ ನೀಡುವುದಿಲ್ಲ. ಈ ಬಗ್ಗೆ ಕ್ರಮಕೈಗೊಂಡಿರುತ್ತೀರ?***

- **ಉತ್ತರ:** ಅರ್ಜಿಗಳನ್ನು ಶಿಕ್ಷಣ ಇಲಾಖೆಯ ವೆಬ್‌ಸೈಟ್www.schooleducation.kar.nic.inಮೂಲಕ ಅಂತರ್‌ಜಾಲದಲ್ಲಿUpload ಮಾಡಲಾಗಿದೆ. ಈ ಅರ್ಜಿಗಳನ್ನು ಉಚಿತವಾಗಿ Down loadಮಾಡಿಕೊಳ್ಳಬಹುದು.

6. ***ಪ್ರಶ್ನೆ: ಶಿಕ್ಷಣ ಹಕ್ಕು ಕಾಯಿದೆ ಪ್ರಕಾರ ಮಕ್ಕಳನ್ನು ಶಾಲೆಗೆ ದಾಖಲು ಮಾಡಿದರೆ ಶುಲ್ಕ ಪಾವತಿ ಮಾಡುವ ಅಗತ್ಯವಿದೆಯೆ?***

- **ಉತ್ತರ:** ಶಿಕ್ಷಣ ಹಕ್ಕು ಕಾಯಿದೆ 2009 ರ ಪ್ರಕಾರ ಪ್ರಾಥಮಿಕ ಶಿಕ್ಷಣ ಕಡ್ಡಾಯ ಮತ್ತು ಉಚಿತವಾಗಿದೆ. (ಅ)ಸೆಕ್ಷನ್ 12(1) (ಎ) ಪ್ರಕಾರ ಸರ್ಕಾರಿ ಶಾಲೆಗಳಲ್ಲಿ ದಾಖಲಾದ ಎಲ್ಲ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಲಾಗುತ್ತದೆ. ಯಾವುದೇ ಶುಲ್ಕವನ್ನು ಪಾವತಿಸಬೇಕಾಗಿಲ್ಲ.

  (ಆ)ಸೆಕ್ಷನ್ 12 (1) (ಬಿ) ಪ್ರಕಾರ ಅನುದಾನಿತ ಶಾಲೆಗಳಲ್ಲಿ ಅವರು ಸರ್ಕಾರದಿಂದ ಪಡೆಯುವ ಅನುದಾನದ ಅನುಪಾತದಲ್ಲಿ (ಶೇಕಡ 25 ಕ್ಕೆ ಕಡಿಮೆ ಇಲ್ಲದಂತೆ) ಅನಾನುಕೂಲ ಪರಿಸ್ಥಿತಿಯಲ್ಲಿರುವ ಮತ್ತು ದುರ್ಬಲವರ್ಗದ ಮಕ್ಕಳಿಗೆ ಶಿಕ್ಷಣ ಸಂಪೂರ್ಣ ಉಚಿತವಾಗಿರುತ್ತದೆ. ಈ ನಿಯಮದ ಅಡಿಯಲ್ಲಿ ದಾಖಲಾದ ಮಕ್ಕಳಿಂದ ಯಾವುದೇ ರೀತಿಯ ಶುಲ್ಕವನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

(ಇ) )ಸೆಕ್ಷನ್ 12 (1) (ಸಿ) ಪ್ರಕಾರ ಅನುದಾನರಹಿತ ಶಾಲೆಗಳಲ್ಲಿ ಆ ಶಾಲೆಯಲ್ಲಿ 1ನೇ ತರಗತಿಗೆ ಅಥವಾ ಪೂರ್ವ ಪ್ರಾಥಮಿಕ ತರಗತಿಗೆ ಲಭ್ಯವಿರುವ ಸೀಟುಗಳ ಪೈಕಿ ಶೇಕಡ 25 ಕ್ಕೆ ಕಡಿಮೆ ಇಲ್ಲದಂತೆ, ಆ ನೆರೆ ಹೊರೆಯಲ್ಲಿ ವಾಸಿಸುವ ಅನಾನುಕೂಲ ಪರಿಸ್ಥಿತಿಯಲ್ಲಿರುವ ಮತ್ತು ದುರ್ಬಲವರ್ಗದ ಮಕ್ಕಳಿಗೆ ಪ್ರವೇಶ ನೀಡಬೇಕಾಗಿದೆ. ಈ ಮಕ್ಕಳಿಗೆ 8ನೇ ತರಗತಿವರೆಗೆ ಶಿಕ್ಷಣ ಸಂಪೂರ್ಣ ಉಚಿತವಾಗಿರುತ್ತದೆ.

(ಈ) ಪ್ರವೇಶಕ್ಕಾಗಿ ಇಲಾಖೆಯಿಂದ ಅಧಿಸೂಚಿಸಿದ ದಿನಾಂಕದ ನಂತರ ನಿಗದಿತ ಅವಧಿಯ ಒಳಗೆ ಅರ್ಜಿ ಸಲ್ಲಿಸಬೇಕು. ಉದಾಹರಣೆಗೆ **2013-14 ನೇ ಸಾಲಿಗೆ ಪ್ರವೇಶ ಅರ್ಜಿಗಳನ್ನು ಸಲ್ಲಿಸುವ ಅವಧಿ ದಿನಾಂಕ: 07-01-2013 ರಿಂದ ಪ್ರಾರಂಭವಾಗಿ ದಿನಾಂಕ: 05-02-2013 ಕ್ಕೆ ಮುಕ್ತಾಯವಾಗುತ್ತದೆ.**

***7.ಪ್ರಶ್ನೆ: ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಹಕ್ಕು ಅಧಿನಿಯಮದಂತೆ ದಾಖಲಾದ ಮಕ್ಕಳಿಗೆ ತಾರತಮ್ಯ ನೀತಿ ಅನುಸರಿಸಿದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?***

- **ಉತ್ತರ:** ಶಿಕ್ಷಣ ಹಕ್ಕು ಕಾಯಿದೆ 2009 ಮತ್ತು ನಿಯಮಗಳು 2012 ರ ಪ್ರಕಾರ ಮೀಸಲಾತಿ ಸೌಲಭ್ಯದಡಿ ದಾಖಲಾದ ಮಕ್ಕಳಿಗೆ ತಾರತಮ್ಯ ಮಾಡಿದಲ್ಲಿ ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧವಾಗುತ್ತದೆ. ಈ ಕುರಿತು ಲಿಖಿತದೂರನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳವರಿಗೆ ಸಲ್ಲಿಸಬಹುದು.

***8. ಪ್ರಶ್ನೆ:ಅಲ್ಪ ಸಂಖ್ಯಾತ ಶಾಲೆಗಳನ್ನು ಹೊರತುಪಡಿಸಿ ಎಂದುಅರ್ಜಿಯಲ್ಲಿ ನಮೂದಿಸಿರುತ್ತೀರಿ. ಅಲ್ಪ ಸಂಖ್ಯಾತ ಶಾಲೆಗಳ ಬಗ್ಗೆ ಮಾಹಿತಿಎಲ್ಲಿದೊರೆಯುತ್ತದೆ.***

- **ಉತ್ತರ:** ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಮಾನ್ಯತೆ ಪಡೆದ ಶಾಲೆಗಳ ಪಟ್ಟಿwww.schooleducation.kar.nic.inರಲ್ಲಿದೊರೆಯುತ್ತದೆ.

***9. ಪ್ರಶ್ನೆ: ಪುರಸಭೆ/ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಸಗಿ ಶಾಲೆಗಳು ಎರಡು/ಮೂರುಇದ್ದು ವಾರ್ಡ್ ವ್ಯಾಪ್ತಿಯಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಅಂತಹ ವೇಳೆಯಲ್ಲಿ ನಾವು ಯಾವ ಶಾಲೆಗೆ ಬೇಕಾದರೂಅರ್ಜಿ ಸಲ್ಲಿಸಬಹುದೆ?***

- **ಉತ್ತರ:** ನೀವು ವಾಸವಾಗಿರುವ ವಾರ್ಡ್ ವ್ಯಾಪ್ತಿಯಲ್ಲಿನ ಯಾವುದೇ ಶಾಲೆಗೆ ಅರ್ಜಿಸಲ್ಲಿಸಬಹುದು.

***10. ಪ್ರಶ್ನೆ: ಪ್ರತಿಷ್ಠಿತ ಖಾಸಗಿ ಶಾಲೆಗಳನ್ನು ನಗರ ವ್ಯಾಪ್ತಿಯಲ್ಲಿ ಸ್ಥಾಪಿಸಿರುತ್ತಾರೆ. ಅಂತಹ ಶಾಲೆಗೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಮಕ್ಕಳನ್ನೂ ಸೇರಿಸಲು ಅವಕಾಶ ಇದೆಯೇ?***

- **ಉತ್ತರ:**ಕಾಯ್ದೆ ಮತ್ತು ನಿಯಮಗಳ ಪ್ರಕಾರ ಶಾಲೆ ಇರುವ ಗ್ರಾಮ ಅಥವಾ ನಗರ ಪ್ರದೇಶದ ಒಂದು ವಾರ್ಡ್‌ನ್ನು "ನೆರೆ ಹೊರೆ" ಎಂದು ವ್ಯಾಖ್ಯಾನಿಸಲಾಗಿದೆ. ಅದರಂತೆ ನೆರೆಹೊರೆಯಲ್ಲಿವಾಸಿಸುವ ಮಕ್ಕಳಿಗೆ ಪ್ರವೇಶ ದಾಖಲಾತಿಯಲ್ಲಿ ಆದ್ಯತೆಯನ್ನು ನೀಡಬೇಕಾಗುತ್ತದೆ. ಆಯಾ ನೆರೆ ಹೊರೆಯ ಎಲ್ಲ ಮಕ್ಕಳಿಗೆ ಪ್ರವೇಶ ನೀಡಿದ ನಂತರ ಹೊರಗಿನ ಮಕ್ಕಳನ್ನು ಪರಿಗಣಿಸಬೇಕಾಗುತ್ತದೆ.

***11. ಪ್ರಶ್ನೆ: ಜಾತಿ/ಆದಾಯ ಪ್ರಮಾಣ ಪತ್ರ ತಂದೆ-ತಾಯಿ ಹೆಸರಿನಲ್ಲಿ ಇದ್ದರೆ ಮಕ್ಕಳನ್ನು ಶಾಲೆಗೆ ಸೇರಿಸಬಹುದೆ?***

- **ಉತ್ತರ:** ಕಂದಾಯ ಇಲಾಖೆಯ ಸಕ್ಷಮ ಪ್ರಾಧಿಕಾರ ನಗದಿತ ನಮೂನೆಯಲ್ಲಿ ನೀಡಿದ ಜಾತಿ/ಆದಾಯಪ್ರಮಾಣ ಪತ್ರದ ಆಧಾರ ಮಕ್ಕಳನ್ನು ಶಾಲೆಗೆ ಸೇರಿಸಬಹುದು.

***12. ಪ್ರಶ್ನೆ: ಶಿಕ್ಷಣ ಹಕ್ಕು ಕಾಯ್ದೆ ಅನ್ವಯ ಶಾಲೆಗೆ ಸೇರಿಸಿದ ಮಕ್ಕಳಿಗೆ ಉಚಿತ ಸಮವಸ್ತ್ರ, ಪಠ್ಯ ಪುಸ್ತಕಗಳನ್ನು ಸಂಬಂಧಿಸಿದ ಶಾಲೆಯಲ್ಲಿ ನೀಡುತ್ತಾರೆಯೇ?***

- **ಉತ್ತರ:** ಆ ಶಾಲೆಯಲ್ಲಿ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ, ಸಮವಸ್ತ್ರಗಳನ್ನು ನೀಡುವ ಪರಿಪಾಠ ಇದ್ದಲ್ಲಿ ಅದೇ ಪರಿಪಾಠದಂತೆ ಆರ್‌ಟಿಇ ಅಡಿಯಲ್ಲಿ ದಾಖಲಾದ ಮಕ್ಕಳಿಗೂ ಉಚಿತವಾಗಿ ನೀಡಬೇಕು. ಒಂದು ವೇಳೆ ಆಡಳಿತ ಮಂಡಳಿ ಪಠ್ಯಪುಸ್ತಕ, ಸಮವಸ್ತ್ರದಖರ್ಚನ್ನು ಶಾಲೆಯಒಟ್ಟು ವೆಚ್ಚದಲ್ಲಿ ಸೇರಿಸಿದ್ದರೆ, ಆರ್.ಟಿ.ಇ.ಅಡಿಯಲ್ಲಿ ದಾಖಲಾದ ಮಕ್ಕಳಿಗೂ ಸಹ ಉಚಿತವಾಗಿ ನೀಡಬೇಕಾಗುತ್ತದೆ.

***13. ಪ್ರಶ್ನೆ: ವಲಸೆ ಮಕ್ಕಳಿಗೆ ಆರ್.ಟಿ.ಇ. ಅಡಿಯಲ್ಲಿಇರುವ ಸೌಲಭ್ಯಗಳೇನು?***

- **ಉತ್ತರ:** ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗುವ ಮಕ್ಕಳು ಅಲ್ಲಿನ ಶಾಲೆಯಲ್ಲಿ ಶಿಕ್ಷಣವನ್ನು ಮುಂದುವರಿಸುವ ಸಲುವಾಗಿ ಅಂತಹ ಮಕ್ಕಳಿಗೆ ಆರ್.ಟಿ.ಇ.ಅಡಿಯಲ್ಲಿದಾಖಲಾತಿಗಾಗಿ ಮೀಸಲಾತಿ ಕಲ್ಪಿಸಲಾಗಿದೆ. ಈ ಸೌಲಭ್ಯ ಪಡೆಯಲು ಹಾಜರು ಪಡಿಸಬೇಕಾದ ದೃಢೀಕರಣ ಪತ್ರದ ನಮೂನೆಯನ್ನುwww.schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ.

*14. ಪ್ರಶ್ನೆ: ಸಮಾಜಕಲ್ಯಾಣ ಇಲಾಖೆ ವಿದ್ಯಾಭ್ಯಾಸಕ್ಕಾಗಿ ನಿಗಧಿಪಡಿಸಿರುವ ನಮೂನೆಗಳು ಎಂದರೆ ಏನು?*

➢ ಉತ್ತರ:www.schooleducation.kar.nic.inನಲ್ಲಿ ಆರ್.ಟಿ.ಇ. ಶೀರ್ಷಿಕೆಯಲ್ಲಿ Application for admission ಎಂಬ ತಲೆಬರಹದಲ್ಲಿ ಪ್ರಕಟಿಸಲಾಗಿರುವ ಲಗತ್ತುಗಳನ್ನು ನೋಡಿ.

*15. ಪ್ರಶ್ನೆ: ಶಿಕ್ಷಣ ಹಕ್ಕು ಕಾಯಿದೆ 2009 ರಅಧಿನಿಯಮದಂತೆ ಐಸಿಎಸ್‌ಇ/ಸಿಬಿಎಸ್‌ಇ/ ಐಬಿಎಸ್ ಪಠ್ಯಕ್ರಮದ ಶಾಲೆಗಳಲ್ಲಿ ಮಕ್ಕಳನ್ನು ಸೇರಿಸಲುಅವಕಾಶವಿದೆಯೇ?*

➢ **ಉತ್ತರ:** ಶಿಕ್ಷಣ ಹಕ್ಕು ಕಾಯಿದೆ 2009 ರ ಪ್ರಕಾರ ಐಸಿಎಸ್‌ಇ/ಸಿಬಿಎಸ್‌ಇ/ಐಬಿಎಸ್ ಪಠ್ಯಕ್ರಮ ಅನುಸರಿಸುತ್ತಿರುವ ನಿಮ್ಮ ವಾಸಸ್ಥಳದ ನೆರೆಹೊರೆಯಲ್ಲಿ ಯಾವುದೇ ಶಾಲೆಯಲ್ಲಿ ಮಕ್ಕಳನ್ನು ಸೇರಿಸಲು ಅವಕಾಶವಿದೆ.

*16. ಪ್ರಶ್ನೆ: 5 ವರ್ಷ, 6 ವರ್ಷ, ಯಾವ ವರ್ಷದ ಮಗು ಶಿಕ್ಷಣ ಹಕ್ಕು ಕಾಯಿದೆ ವ್ಯಾಪ್ತಿಗೆ ಬರುತ್ತದೆ.?*

➢ **ಉತ್ತರ:** ಆರ್.ಟಿ.ಇ. 2009 ರ ಪ್ರಕಾರ 6 ವರ್ಷ ಪೂರೈಸಿದ ಮಗುವನ್ನು 1 ನೇ ತರಗತಿಗೆ ದಾಖಲು ಮಾಡುವುದು ಕಡ್ಡಾಯ. 5 ವರ್ಷ ಪೂರ್ಣಗೊಳಿಸಿದ, 6 ವರ್ಷ ಪೂರ್ಣಗೊಳಿಸದೇ ಇರುವ ಮಕ್ಕಳನ್ನು ಸ್ವ ಇಚ್ಚೆಯ ಮೇರೆಗೆ 1ನೇ ತರಗತಿಗೆ ದಾಖಲಿಸಬಹುದು. 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಪೂರ್ವ ಪ್ರಾಥಮಿಕ ತರಗತಿಗೆ ದಾಖಲಿಸಬಹುದು.

*17. ಪ್ರಶ್ನೆ: ಅನುದಾನಿತ ಶಾಲೆಯಲ್ಲಿ 4 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಠ ಜಾತಿ/ಪರಿಶಿಷ್ಟ ವರ್ಗದ ಮಕ್ಕಳಿಗೆ ಸೆಕ್ಷನ್ 12(1) (ಸಿ) ಅನ್ವಯವಾಗುತ್ತದೆಯೇ?*

**ಉತ್ತರ:** ಆರ್.ಟಿ.ಇ.ಕಾಯಿದೆ2009 ಮತ್ತು ನಿಯಮ 2012 ರ ಪ್ರಕಾರ 2012-13 ನೇ ಶೈಕ್ಷಣಿಕ ಸಾಲಿನಿಂದ ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ 1 ರಿಂದ 8 ನೇ ತರಗತಿವರೆಗಿನ ಮಕ್ಕಳಿಗೆ ಅನ್ವಯವಾಗುತ್ತದೆ.**ಸೆಕ್ಷನ್ 12 (1) (ಬಿ) ಪ್ರಕಾರ** ಅನುದಾನಿತ ಶಾಲೆಗಳಲ್ಲಿ ಅವರು ಸರ್ಕಾರದಿಂದ ಪಡೆಯುವ ಅನುದಾನದ ಅನುಪಾತದಲ್ಲಿ (ಶೇಕಡ 25 ಕ್ಕೆ ಕಡಿಮ ಇಲ್ಲದಂತೆ) ಅನಾನುಕೂಲ ಪರಿಸ್ಥಿತಿಯಲ್ಲಿರುವ ಮತ್ತು ದುರ್ಬಲವರ್ಗದ ಮಕ್ಕಳಿಗೆ ಶಿಕ್ಷಣ ಸಂಪೂರ್ಣ ಉಚಿತವಾಗಿರುತ್ತದೆ.

## ಭಾಗ-2

*1. ಪ್ರಶ್ನೆ: ಸೂಕ್ತ ಸರ್ಕಾರ ಅಂದರೆ ಏನು?*

➢ **ಉತ್ತರ:** ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 2 (ಎ) ರಲ್ಲಿ ವಿವರಿಸಿದ ಪ್ರಕಾರ ಸೂಕ್ತ ಸರ್ಕಾರ ಎಂದರೆ;

(i)ಕೇಂದ್ರ ಸರ್ಕಾರದಿಂದ ಸ್ಥಾಪಿಸಲ್ಪಟ್ಟು ಅದರ ಮಾಲೀಕತ್ವದಲ್ಲಿ ನಡೆಸಲ್ಪಡುತ್ತಿರುವ ಶಾಲೆಗೆ ಅಥವಾ ಶಾಸನ ಸಭೆಯನ್ನು ಹೊಂದಿರದ ಕೇಂದ್ರಾಡಳಿತ ಪ್ರದೇಶದ ಆಡಳಿತಾಧಿಕಾರಿಯಿಂದ ಸ್ಥಾಪಿಸಲ್ಪಟ್ಟು ಅವರ ಮಾಲೀಕತ್ವದಲ್ಲಿ ನಡೆಸಲಾಗುತ್ತಿರುವ ಶಾಲೆಗೆ ಕೇದ್ರ ಸರ್ಕಾರವು ಸೂಕ್ತ ಸರ್ಕಾರವಾಗುತ್ತದೆ.

(ii) ಯಾವುದೇ ಶಾಲೆ ಒಂದು ರಾಜ್ಯದ ಭೌಗೋಳಿಕ ವ್ಯಾಪ್ತಿಗೊಳಪಟ್ಟಿದ್ದಲ್ಲಿ ಅದಕ್ಕೆ;

(ಎ) ಆ ರಾಜ್ಯದ ರಾಜ್ಯ ಸರ್ಕಾರವು ಸೂಕ್ತ ಸರ್ಕಾರವಾಗುತ್ತದೆ.

(ಬಿ) ಶಾಸನ ಸಭೆಯನ್ನು ಹೊಂದಿದ ಕೇಂದ್ರಾಡಳಿತ ಪ್ರದೇಶದ ಭೌಗೋಳಿಕ ವ್ಯಾಪ್ತಿಗೊಳಪಟ್ಟಿದ್ದಲ್ಲಿ ಅಂತಹ ಶಾಲೆಗೆ ಸಂಬಂಧಪಟ್ಟ ಕೇಂದ್ರಾಡಳಿತ ಪ್ರದೇಶದ ಸರ್ಕಾರವು ಸೂಕ್ತ ಸರ್ಕಾರವಾಗುತ್ತದೆ.

*2. ಪ್ರಶ್ನೆ: ಸ್ಥಳೀಯ ಪ್ರಾಧಿಕಾರ ಅಂದರೆ ಏನು?*

➢ **ಉತ್ತರ:** ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 2 (ಹೆಚ್) ರಲ್ಲಿ ವಿವರಿಸಿದ ಪ್ರಕಾರ ಸ್ಥಳೀಯ ಪ್ರಾಧಿಕಾರ ಎಂದರೆ; ನಗರ ಪ್ರದೇಶದಲ್ಲಿ ಮುನಸಿಫಲ್ ಕಾರ್ಪೋರೇಷನ್ ಅಥವಾ ಮುನಸಿಫಲ್ ಕೌನ್ಸಿಲ್, ಅಥವಾ ಜಿಲ್ಲಾ ಪರಿಷತ್ (ನಮ್ಮ ರಾಜ್ದಲ್ಲಿ ಜಿಲ್ಲಾ ಪಂಚಾಯತ್) ಅಥವಾ ನಗರ ಪಂಚಾಯತ್ (ಪಟ್ಟಣ ಪಂಚಾಯತ್), ಅಥವಾ ಗ್ರಾಮೀಣ ಪ್ರದೇಶದಲ್ಲಿ ಪಂಚಾಯತ್ (ಗ್ರಾಮ ಪಂಚಾಯತ್).

*3. ಪ್ರಶ್ನೆ: ಆರ್.ಟಿ.ಇ. ಪ್ರಕಾರ ಶಾಲೆಗಳ ವ್ಯಾಖ್ಯಾನವೇನು?*

➢ **ಉತ್ತರ:** ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 2 (ಎನ್) ರಲ್ಲಿ ವಿವರಿಸಿದ ಪ್ರಕಾರ "ಶಾಲೆ" ಎಂದರೆ; ಮಾನ್ಯತೆ ಪಡೆದು ಎಲಿಮೆಂಟರಿ ಶಿಕ್ಷಣವನ್ನು ನೀಡುತ್ತಿರುವ ಯಾವುದೇ ಶಾಲೆ. ಅದರಲ್ಲಿ ಈ ಕೆಳಗಿನವು ಸೇರುತ್ತವೆ. (i) ಸೂಕ್ತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲ್ಪಟ್ಟು ನಡೆಸಲಾಗುತ್ತಿರುವ ಶಾಲೆ

(ii) ಸೂಕ್ತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಪೂರ್ಣವಾಗಿ ಅಥವಾ ಭಾಗಶಃ ಅನುದಾನ ಪಡೆದು ನಡೆಸಲಾಗುತ್ತಿರುವ ಅನುದಾನಿತ ಶಾಲೆ.

(iii) ವಿಶೇಷ ವರ್ಗಕ್ಕೆ ಸೇರಿದ ಶಾಲೆ

(iv) ಸೂಕ್ತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಯಾವುದೇ ರೀತಿಯ ಅನುದಾನವನ್ನು ಪಡೆಯದೇ ನಡೆಸಲಾಗುತ್ತಿರುವ ಶಾಲೆ

**4. ಪ್ರಶ್ನೆ: ವಿಶೇಷ ವರ್ಗಕ್ಕೆ ಸೇರಿದ ಶಾಲೆ ಎಂದರೆ ಯಾವುದು?**

➢ **ಉತ್ತರ:** ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ, ಸೈನಿಕ ಶಾಲೆ, ಮುಂತಾದ ವಿಶೇಷ ಗುಣ ಲಕ್ಷಣಗಳನ್ನು ಹೊಂದಿದ, ಸೂಕ್ತ ಸರ್ಕಾರದಿಂದ ಅಧಿಸೂಚಿಸಲ್ಪಟ್ಟ ಶಾಲೆಗಳು

***5. ಪ್ರಶ್ನೆ: ಆರ್.ಟಿ.ಇ. ಕಾಯಿದೆಯನ್ನು ಉಲ್ಲಂಘಿಸಿದವರ ವಿರುದ್ಧ ದೂರನ್ನು ಯಾರಿಗೆ ಸಲ್ಲಿಸಬೇಕು?***

➢ **ಉತ್ತರ:** ಆರ್.ಟಿ.ಇ. ಕಾಯಿದೆಯನ್ನು ಉಲ್ಲಂಘಿಸಿದವರ ವಿರುದ್ಧ ಕ್ರಮ ಕೈಗೊಳ್ಳುವ ಸಲುವಾಗಿ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರವನ್ನು (ಡಿಸ್ಟ್ರಿಕ್ಟ್ ಎಜುಕೇಶನ್ ರೆಗ್ಯುಲೇಟರಿ ಅಥಾರಿಟಿ) ರಚಿಸಲಾಗಿದೆ. ಇದಕ್ಕೆ ಜಿಲ್ಲಾಧಿಕಾರಿಯವರು ಅಧ್ಯಕ್ಷರಾಗಿರುತ್ತಾರೆ. ಬಾಧಿತರಾದವರು ಈ ಪ್ರಾಧಿಕಾರಕ್ಕೆ ದೂರನ್ನು ಸಲ್ಲಿಸಬಹುದು.

***6. ಪ್ರಶ್ನೆ: ಆರ್.ಟಿ.ಇ.ಅಡಿಯಲ್ಲಿ ಮೀಸಲಾತಿಗೆ ಅನುಗುಣವಾಗಿ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ದಾಖಲಾದ ಮಕ್ಕಳ ಶುಲ್ಕ ಮರುಪಾವತಿ ಹೇಗೆ?***

➢ **ಉತ್ತರ:** ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಆರ್.ಟಿ.ಇ.ಅಡಿಯಲ್ಲಿ ಮೀಸಲಾತಿಗೆ ಅನುಗುಣವಾಗಿ ದಾಖಲಾದ ಮಕ್ಕಳ ಶುಲ್ಕ ಮರುಪಾವತಿಯನ್ನು ಸರ್ಕಾರದಿಂದ ಮಾಡಲಾಗುತ್ತದೆ.

***7. ಪ್ರಶ್ನೆ: ಶುಲ್ಕ ಮರುಪಾವತಿ ಲೆಕ್ಕಾಚಾರವನ್ನು ಹೇಗೆ ಮಾಡಲಾಗುತ್ತದೆ?***

➢ **ಉತ್ತರ:** ಸಂಬಂಧಪಟ್ಟ ಶಾಲಾ ಆಡಳಿತವರ್ಗದವರು ಶಾಲೆಯನ್ನು ನಡೆಸಲು ಮಾಡಲಾದ ವಾರ್ಷಿಕ ತಲಾವಾರು ಆವರ್ತಕ ವೆಚ್ಚ ಅಥವಾ ಅವರು ಪ್ರತಿ ವಿದ್ಯಾರ್ಥಿಯಿಂದ ತೆಗೆದುಕೊಳ್ಳಲಾಗುತ್ತಿರುವ ವಾರ್ಷಿಕ ಶುಲ್ಕ ಅಥವಾ ಸರ್ಕಾರದಿಂದ ನಿಗದಿಪಡಿಸಲಾದ ಗರಿಷ್ಠ ಮೊತ್ತ ಈ ಮೂರರಲ್ಲಿ ಯಾವುದು ಕಡಿಮೆಯೋ ಅದನ್ನು ಶಾಲೆಯವರಿಗೆ ಮರುಪಾವತಿಸಲಾಗುತ್ತದೆ.

***8. ಶುಲ್ಕ ಮರುಪಾವತಿಗೆ ಸರ್ಕಾರದಿಂದ ನಿಗದಿಪಡಿಸಲಾದ ಗರಿಷ್ಠ ಮೊತ್ತ ಎಷ್ಟು?***

**ಉತ್ತರ:** ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 27 ಮಾಹಿತಿ 2012, ದಿನಾಂಕ 8 ಮೇ 2012 ರ ಪ್ರಕಾರ ಅನುದಾನ ರಹಿತ ಶಾಲೆಗಳಲ್ಲಿ ಶೇಕಡ 25 ಮೀಸಲಾತಿ ಅಡಿಯಲ್ಲಿ ದಾಖಲಾದ ಪ್ರಾಥಮಿಕ 1ನೇ ತರಗತಿಯ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಶಾಲೆಗಳಿಗೆ ಮರುಪಾವತಿಸಬಹುದಾದ ತಲಾವಾರು ವೆಚ್ಚದ ಗರಿಷ್ಠ ಮೊತ್ತ ರೂ.11848/- ಅದೇ ರೀತಿ ಪೂರ್ವ ಪ್ರಾಥಮಿಕ ತರಗತಿಯ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಶಾಲೆಗಳಿಗೆ ಮರುಪಾವತಿಸಬಹುದಾದ ತಲಾವಾರು ವೆಚ್ಚದ ಗರಿಷ್ಠ ಮೊತ್ತ ರೂ. 5924/-

***9. ಪ್ರಶ್ನೆ: ತಲಾವಾರು ವಾರ್ಷಿಕ ವೆಚ್ಚವನ್ನು ಯಾವ ರೀತಿ ಲೆಕ್ಕಾಚಾರ ಮಾಡಲಾಗುತ್ತದೆ?***

➢ **ಉತ್ತರ:** ಒಂದು ವರ್ಷದಲ್ಲಿ ಶಾಲೆ ನಡೆಸಲು ಮಾಡಲಾದ ಆವರ್ತಕ ವೆಚ್ಚಗಳನ್ನು ಶಾಲೆಯಲ್ಲಿ ದಾಖಲಾದ ಮಕ್ಕಳ ಸಂಖ್ಯೆಯಿಂದ ಭಾಗಿಸಿದಾಗ ವಾರ್ಷಿಕ ತಲಾವಾರು ವೆಚ್ಚ ಲಭ್ಯವಾಗುತ್ತದೆ.

***10. ಪ್ರಶ್ನೆ: ಆವರ್ತಕ ವೆಚ್ಚಗಳು ಅಂದರೆ ಯಾವುವು?***

➢ **ಉತ್ತರ:**ಶಿಕ್ಷಕರ ವೇತನ, ಶಿಕ್ಷಕೇತರ ಸಿಬ್ಬಂದಿಯ ವೇತನ, ಸಾದಿಲ್ವಾರು ಖರ್ಚು, ಕಟ್ಟಡ ಬಾಡಿಗೆ (ಬಾಡಿಗೆ ಕಟ್ಟಡವಾಗಿದ್ದಲ್ಲಿ), ಕಟ್ಟಡ ದುರಸ್ತಿ, ಮಕ್ಕಳಿಗೆ ನೀಡಲಾಗುವ ಸಮವಸ್ತ್ರ, ಪಠ್ಯ ಪುಸ್ತಕ, ಗ್ರಂಥಾಲಯ ಪುಸ್ತಕ ಖರೀದಿ, ಪ್ರಯೋಗಾಲಯದಲ್ಲಿ ಬಳಸಲಾಗುವ ಕಚ್ಚಾವಸ್ತುಗಳ ಖರೀದಿ,ಕ್ರೀಡಾ ಸಾಮಗ್ರಿಗಳ ಖರೀದಿ ಇತ್ಯಾದಿಗಳು, ಮಕ್ಕಳ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಮಾಡಲಾದ ವೆಚ್ಚಗಳು ಆವರ್ತಕ ವೆಚ್ಚದಲ್ಲಿ ಸೇರುತ್ತವೆ.

***11. ಪ್ರಶ್ನೆ: ಆವರ್ತಕವಲ್ಲದ ವೆಚ್ಚಗಳು ಅಂದರೆ ಯಾವುವು?***

➢ **ಉತ್ತರ:** ಪ್ರತಿ ವರ್ಷವೂ ಮಾಡದಿರುವ ವೆಚ್ಚಗಳು, ಅಂದರೆ; ಕಟ್ಟಡ ನಿರ್ಮಾಣ, ಪೀಠೋಪಕರಣಗಳ ಖರೀದಿ, ನಿವೇಶನ ಖರೀದಿ, ದುಬಾರಿ ವೆಚ್ಚದ ಉಪಕರಣಗಳ ಖರೀದಿ, ಇತ್ಯಾದಿ ಬಂಡವಾಳ ಹೂಡಿಕೆಗಳು ಆವರ್ತಕ ವೆಚ್ಚದ ಅಡಿಯಲ್ಲಿ ಬರುವುದಿಲ್ಲ.

***12. ಪ್ರಶ್ನೆ: ಆವರ್ತಕ ವೆಚ್ಚಗಳನ್ನು ಪುಷ್ಟೀಕರಿಸಲು ಒದಗಿಸಬೇಕಾದ ದಾಖಲೆ ಯಾವುದು?***

- **ಉತ್ತರ:** ಶಾಲೆಯ ವಾರ್ಷಿಕ ಆವರ್ತಕ ವೆಚ್ಚಗಳನ್ನು ಪುಷ್ಟೀಕರಿಸಲು ಲೆಕ್ಕ ಪರಿಶೋಧಕರಿಂದ (ಆಡಿಟರ್) ಪಡೆದ ಆಡಿಟ್ ಸರ್ಟಿಫಿಕೇಟನ್ನು ಹಾಜರುಪಡಿಸಬೇಕಾಗುತ್ತದೆ.

*13. ಪ್ರಶ್ನೆ: ಶುಲ್ಕ ಮರುಪಾವತಿ ಪಡೆಯಲು ಶಾಲೆಯವರು ಕೈಗೊಳ್ಳಬೇಕಾದ ಕ್ರಮ ಏನು?*

- **ಉತ್ತರ:**ಶುಲ್ಕ ಮರುಪಾವತಿ ಪಡೆಯಲು ಶಾಲೆಯವರು ಇಲಾಖೆಯಿಂದ ನಿಗದಿಪಡಿಸಿದ ನಮೂನೆ VI ಅಥವಾ VI (A) ರಲ್ಲಿ ನಿಗದಿಪಡಿಸಿದ ಎಲ್ಲ ವಿವರಗಳನ್ನು ದೃಢೀಕರಿಸಿ ಶುಲ್ಕ ಮರುಪಾವತಿಯ ಕ್ಲೈಮ್ ನ್ನು ಕ್ಷೇತ್ರ ಶಿಕ್ಷಣಾಧಿಕಾರಿಗೆ ಸಲ್ಲಿಸಬೇಕು.

*14. ಪ್ರಶ್ನೆ: ಶುಲ್ಕ ಮರುಪಾವತಿ ಕುರಿತಂತೆ ಮುಂದಿನ ಕ್ರಮ ಏನು?*

- **ಉತ್ತರ:** ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲ ಶಾಲೆಗಳ ಕ್ರೋಡೀಕರಿಸಿದ ಬೇಡಿಕೆಯನ್ನು ನಮೂನೆ VII ಮತ್ತು VII (A) ರಲ್ಲಿ ಉಪ ನಿರ್ದೇಶಕರ ಮೇಲು ಸಹಿಯೊಂದಿಗೆ ಆಯುಕ್ತರು ಅಥವಾ ಅಪರ ಆಯುಕ್ತರಿಗೆ ಸಲ್ಲಿಸಿ ಆಯವ್ಯಯವನ್ನು ಪಡೆದು ಸಂಬಂಧಪಟ್ಟ ಶಾಲೆಯ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು.

*15. ಪ್ರಶ್ನೆ: ನಮೂನೆ VI, VI (A), VII, VII (A) ಬಗ್ಗೆ ವಿವರಣೆ ಏನು?*

- **ಉತ್ತರ:** ಶಾಲೆಯವರು 1 ನೆಯ ತರಗತಿ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಗಾಗಿ ಕ್ಲೈಮನ್ನು ಸಲ್ಲಿಸಲು ನಿಗದಿಪಡಿಸಲಾದ ನಮೂನೆ VI, ಹಾಗೂ ಪೂರ್ವ ಪ್ರಾಥಮಿಕ ತರಗತಿಯ ವಿದ್ಯಾರ್ಥಿಗಳ ಶುಲ್ಕ ಮರುಪಾವತಿ ಕ್ಲೈಮನ್ನು ಸಲ್ಲಿಸಲು ನಿಗದಿಪಡಿಸಲಾದ ನಮೂನೆ VI (A).

  ಕ್ಷೇತ್ರ ಶಿಕ್ಷಣಾಧಿಕಾರಿಯವರು 1ನೆಯ ತರಗತಿ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಗಾಗಿ ತಾಲ್ಲೂಕುವಾರು ಕ್ರೋಢೀಕರಿಸಿದ ಕ್ಲೈಮನ್ನು ಸಲ್ಲಿಸಲುನಿಗದಿಪಡಿಸಲಾದ ನಮೂನೆ VII, ಪೂರ್ವ ಪ್ರಾಥಮಿಕ ತರಗತಿಯ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಗಾಗಿಕ್ರೋಢೀಕರಿಸಿದ ಕ್ಲೈಮನ್ನು ಸಲ್ಲಿಸಲು ನಿಗದಿಪಡಿಸಲಾದ ನಮೂನೆ VII (A).

*16. ಪ್ರಶ್ನೆ: ಶುಲ್ಕ ಮರುಪಾವತಿಯನ್ನು ಯಾವಾಗ ಮಾಡಲಾಗುತ್ತದೆ.*

- **ಉತ್ತರ:** ಶುಲ್ಕ ಮರುಪಾವತಿಯನ್ನು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಎರಡು ಕಂತುಗಳಲ್ಲಿ ಮಾಡಲಾಗುತ್ತದೆ. ಮೊದಲನೆಯ ಕಂತು ಸೆಪ್ಟೆಂಬರ್ ತಿಂಗಳಲ್ಲಿ ಮತ್ತು ಎರಡನೆಯ ಕಂತನ್ನು ಜನವರಿ ತಿಂಗಳಲ್ಲಿ ಪಾವತಿಸಲಾಗುತ್ತದೆ.

*17. ಪ್ರಶ್ನೆ: ಅನುದಾನಿತ (ಏಕಾಂಗಿ–ಸ್ಟಾಂಡ್ ಅಲೋನ್) ಪ್ರೌಢಶಾಲೆಗಳಲ್ಲಿ 8ನೇ ತರಗತಿಗೆ ಶಿಕ್ಷಣ ಹಕ್ಕು ಕಾಯ್ದೆ ಅಡಿಯಲ್ಲಿ ಅನಾನುಕೂಲ ಸ್ಥಿತಿಯಲ್ಲಿರುವ ಮತ್ತು ದುರ್ಬಲವರ್ಗದವರಿಗೆ ಶಾಲೆಗೆ ಸರ್ಕಾರದಿಂದ ನೀಡಲಾದ ಅನುದಾನದ ಅನುಪಾತದಲ್ಲಿ ಮೀಸಲಾತಿ ನೀಡಬೇಕೆ?*

- **ಉತ್ತರ:** ಶಿಕ್ಷಣ ಹಕ್ಕು ಕಾಯ್ದೆಯು 1ನೇ ತರಗತಿಯಿಂದ 8ನೇ ತರಗತಿಯವರೆಗೆ ಅನ್ವಯವಾಗುವುದರಿಂದ ಸೆಕ್ಷನ್ 12 (1) (ಬಿ) ಪ್ರಕಾರ ಅನುದಾನಿತ ಪ್ರೌಢಶಾಲೆಗಳಲ್ಲಿ 8ನೇ ತರಗತಿಯ ದಾಖಲಾತಿಯನ್ನು ಮಾಡುವಾಗ ಆ ಶಾಲೆಗೆ ಸರ್ಕಾರದಿಂದ ಪಡೆಯಲಾದ ಅನುದಾನಕ್ಕೆ ಅನುಗುಣವಾಗಿ ಕನಿಷ್ಠ 25% ಕ್ಕಿಂತ ಕಡಿಮೆ ಇಲ್ಲದಂತೆ ***ಅನಾನುಕೂಲ ಸ್ಥಿತಿಯಲ್ಲಿರುವ ಮತ್ತು ದುರ್ಬಲವರ್ಗದ*** ಮಕ್ಕಳನ್ನು ದಾಖಲು ಮಾಡಿಕೊಂಡು ಅವರಿಗೆ ಉಚಿತ ಶಿಕ್ಷಣವನ್ನು ನೀಡುವುದು ಕಡ್ಡಾಯವಾಗಿರುತ್ತದೆ. (ವಿವರಗಳಿಗೆ ಸುತ್ತೋಲೆ ಸಂಖ್ಯೆ: ಆರ್.ಟಿ.ಇ.1/2012–13 ದಿನಾಂಕ: 10–05–2012 ರ ಕಂಡಿಕೆ 1ನ್ನು ನೋಡಿ. ಇದು ಇಲಾಖೆಯ ವೆಬ್ ಸೈಟ್ ನಲ್ಲಿ ಲಭ್ಯವಿರುತ್ತದೆ.)

(ಎಸ್.ಆರ್. ಉಮಾಶಂಕರ್, ಭಾಆಸೇ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ